**ಓ ಎಸ್ ನಂ 21/2016**

**ಡಿ. ಡಬ್ಲ್ಯೂ ಃ 1**

**ದಿಃ 11.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದ ಃ**

ವಾದಿ ನನ್ನ ದೊಡ್ಡಪ್ಪನ ಮಗ. ದಾವಾ ಸ್ವತ್ತು ಮೊದಲಿಗೆ 12 ಎಕರೆ 10 ಗುಂಟೆ ಇದ್ದು, ಅದರಲ್ಲಿ 11 ಗುಂಟೆ ಖರಾಬು ಇದ್ದು, ಅದರ ವಿಸ್ತೀರ್ಣ 11 ಎಕರೆ 39 ಗುಂಟೆ ಇರುತ್ತದೆ. ಸ.ನಂ. 1 ಮೂಲತಃ ನಮ್ಮ ತಾತನಿಗೆ ಸೇರಿದ ಸ್ವತ್ತಾಗಿರುತ್ತದೆ. ವಾದಿಯ ತಂದೆಗೆ 4 ಎಕರೆ ಜಮೀನು, ಗಂಗಾಧರಪ್ಪ ರವರಿಗೆ 4 ಎಕರೆ, ನನ್ನ ತಂದೆ ಜಯಣ್ಣ ನವರಿಗೆ 3 ಎಕರೆ 39 ಗುಂಟೆ ಜಮೀನು ವಿಭಾಗದಲ್ಲಿ ಬಂದಿರುತ್ತದೆ. ಸದರಿ 4 ಎಕರೆ ಜಮೀನು ವಾದಿಯ ಹೆಸರಿಗೆ ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಾಗ ಬಂದಿರುತ್ತದೆ. ಸದರಿ 4 ಎಕರೆ ಜಮೀನು ಎರಡು ಕಡೆ ಇರುತ್ತದೆ. ಅದರಲ್ಲಿ 3 ಎಕರೆ 24 ಗುಂಟೆ ಒಂದು ಕಡೆ ಮತ್ತು 19 ಗುಂಟೆ ಜಮೀನು ಮತ್ತೊಂದು ಕಡೆ ಇರುತ್ತದೆ. ಸದರಿ 19 ಗುಂಟೆ ಜಮೀನಿನಲ್ಲಿ ಒಂದು ರಸ್ತೆ ಇರುತ್ತದೆ. ಸದರಿ 19 ಗುಂಟೆಯಲ್ಲಿ 1 ಗುಂಟೆ ಖರಾಬು ಇರುತ್ತದೆ ಎಂದರೆ ಸಾಕ್ಷಿ ಅದು ರಸ್ತೆ ಇರುವ ಜಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಗಳು ಅವರ ಹೆಸರಿಗೆ ಬಂದಿರುವ ಜಾಗವನ್ನು ಅಳತೆ ಮಾಡಿಸಿ ಸ್ಕೆಚ್ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಮಾಡಿಸಿರಬಹುದು ಎಂದು ನುಡಿಯುತ್ತಾರೆ.

ನಾನು ಸ.ನಂ. 1 ಸ್ಕೆಚ್ ಮಾಡಿಸಿದ ನಂತರ ಅದು ಸ.ನಂ. 1/2 ಆಗಿದೆ ಎಂದರೆ ಆಗಿರಬಹುದು. ಪ್ರಸ್ತುತ ದಾವೆಯನ್ನು ವಾದಿ ಸ,ನಂ. 1/2 ಕ್ಕೆ ಸಂಬಂಧಿಸಿದಂತೆ ಹೂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಜಮೀನನ್ನು ಸೇರಿಸಿ ದಾವೆಯನ್ನು ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನನಗೆ ಸೇರಿದ ಎಷ್ಟು ಜಾಗಕ್ಕೆ ದಾವಾ ಸ್ವತ್ತನ್ನು ಹಾಕಿರುತ್ತಾರೆ ಎಂದು ಕೇಳಿದರೆ ಸಾಕ್ಷಿ ಅದನ್ನು ಅಳತೆ ಮಾಡದೇ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಸ.ನಂ. 1/1 ನನಗೆ ಸೇರಿದ ಜಮೀನು ಎಂದರೆ ಸಾಕ್ಷಿ ಸ.ನಂ. 1/1 ನ್ನು ವಾದಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ಮಾಡಿಸಿದಾಗ ವಾದಿಗೆ ನಾನು ವಾದಿಯ ಜಮೀನನ್ನು ಒತ್ತುವರಿ ಮಾಡಿಸಿರುವುದಾಗಿ ಗೊತ್ತಾಗಿರುತ್ತದೆ ಎಂದರೆ ಸುಳ್ಳು. ನಾನು ಒತ್ತುವರಿ ಮಾಡಿ ವಾದಿಗಳ ಸ್ವಾಧೀನಕ್ಕೆ ಧಕ್ಕೆ ಉಂಟು ಮಾಡುತ್ತಿದ್ದೆ ಎಂದರೆ ಸುಳ್ಳು. ನಾನು ಒತ್ತುವರಿ ಮಾಡಿರುವ ಜಮೀನನ್ನು ತೆರವು ಮಾಡಿಕೊಡಲು

ತಹಶೀಲ್ದಾರ್ ರವರು ಆದೇಶ ಮಾಡಿರುತ್ತಾರೆ ಎಂದರೆ ಸುಳ್ಳು. ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸುಳ್ಳು.

ನನ್ನ ತಾಯಿಯ ಹೆಸರು ಚನ್ನಮ್ಮ. ಸ.ನಂ. 1/2 ರ ದಕ್ಷಿಣಕ್ಕೆ ನಮ್ಮ ಜಮೀನು ಬರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಎಂ ಎಸ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**